# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 183 |
| ಸದಸ್ಯರ ಹೆಸರು | ಶ್ರೀ ರಮೇಶ್ ಬಾಬು |
| ಉತ್ತರಿಸುವ ದಿನಾಂಕ | 28.01.2026 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಧಾರ್ಮಿಕ ಹಾಗೂ ಧರ್ಮದಾಯ ದತ್ತಿಗಳ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಯಾವ ಯಾವ ಹೊಸ ಯೋಜನೆಗಳನ್ನು ಜಾರಿಗೊಳಿಸಿದೆ; | ಧಾರ್ಮಿಕ ಹಾಗೂ ಧರ್ಮದಾಯ ದತ್ತಿಗಳ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರದಿಂದ ಜಾರಿಗೊಳಿಸಲಾದ ಹೊಸ ಯೋಜನೆಗಳ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಆ) | ರಾಜ್ಯ ಸರ್ಕಾರ ವಾರ್ಷಿಕ ತಸ್ತಿಕ್ ಮೂಲಕ ಒಟ್ಟು ಎಷ್ಟು ಹಣವನ್ನು ನೀಡುತ್ತಿದೆ; ರಾಜ್ಯದಲ್ಲಿ ಒಟ್ಟು ಎಷ್ಟು ದೇವಾಲಯಗಳು ತಸ್ತಿಕ್ ಹಣವನ್ನು ಪಡೆಯುತ್ತಿವೆ; | ರಾಜ್ಯ ಸರ್ಕಾರದಿಂದ ಪ್ರಸಕ್ತ ಸಾಲಿನಲ್ಲಿ ತಸ್ತೀಕ್ ಯೋಜನೆಯಡಿ ಒಟ್ಟು **ರೂ.185.00** ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. ರಾಜ್ಯದಲ್ಲಿ ಒಟ್ಟು **25,171** ದೇವಾಲಯಗಳು/ ಧಾರ್ಮಿಕ ಸಂಸ್ಥೆಗಳು ತಸ್ತೀಕ್ ಹಣವನ್ನು ಪಡೆಯುತ್ತಿವೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ದುರಸ್ತಿ, ಜೀರ್ಣೋದ್ಧಾರ ಮತ್ತು ನಿರ್ವಹಣೆಗೆ ಎಷ್ಟು ಅನುದಾನಗಳನ್ನು ನೀಡಿರುತ್ತದೆ? | ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರದಿಂದ ಈ ಕೆಳಕಂಡ ವಿವಿಧ ಯೋಜನೆಗಳಡಿ ದುರಸ್ತಿ, ಜೀರ್ಣೋದ್ಧಾರ ಮತ್ತು ನಿರ್ವಹಣೆಗೆ ಒಟ್ಟು **ರೂ.1557.92 ಕೋಟಿಗಳ** ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. |

| ಯೋಜನೆ | 2022-23 | 2023-24 | 2024-25 | ಒಟ್ಟು |
|---|---|---|---|---|
| **(ರೂ.ಲಕ್ಷಗಳಲ್ಲಿ)** | | | | |
| ದುರಸ್ತಿ/ಜೀರ್ಣೋದ್ಧಾರ/ನಿರ್ಮಾಣ | 60612.46 | 8775.00 | 22962.04 | **92349.50** |
| ಆರಾಧನಾ ಯೋಜನೆ | 499.52 | 499.52 | 499.52 | **1498.56** |
| ಪರಿಶಿಷ್ಟ ಜಾತಿ ಉಪಯೋಜನೆ | 499.52 | 499.52 | 499.52 | **1498.56** |
| ಗಿರಿಜನ ಉಪ ಯೋಜನೆ | 119.97 | 119.97 | 119.97 | **359.91** |
| ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಪರಿಶಿಷ್ಟ ಜಾತಿ ಉಪಯೋಜನೆಗೆ | 1937.99 | 519.05 | 137.99 | **2595.03** |
| ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಗಿರಿಜನ ಉಪ ಯೋಜನೆಗೆ | 3035.99 | 712.64 | 116.99 | **3865.62** |
| ತಸ್ತೀಕ್ | 15600.00 | 15691.00 | 15491.46 | **46782.46** |
| ವರ್ಷಾಸನ | 1821.06 | 2914.00 | 2107.65 | **6842.71** |
| **ಒಟ್ಟು** | **84126.51** | **29730.70** | **41935.14** | **155792.35** |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಈ)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಕೈಲಾಸ ಮಾನಸ ಸರೋವರ ಯಾತ್ರಿಕರಿಗೆ, ಚಾರ್ ಧಾಮ್ ಯಾತ್ರಿಕರಿಗೆ ಎಷ್ಟು ಸಹಾಯಧನ ನೀಡಿರುತ್ತದೆ; ಒಟ್ಟು ಎಷ್ಟು ಮಂದಿ ಯಾತ್ರಿಕರು ಇದರ ಪ್ರಯೋಜನ ಪಡೆದುಕೊಂಡಿರುತ್ತಾರೆ;</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಕೈಲಾಸ ಮಾನಸ ಸರೋವರ ಯಾತ್ರಿಕರಿಗೆ ತಲಾ ರೂ.30,000/-ಗಳಂತೆ ಹಾಗೂ ಚಾರ್ ಧಾಮ್ ಯಾತ್ರಿಕರಿಗೆ ತಲಾ ರೂ.20,000/-ಗಳಂತೆ ಸಹಾಯಧನದ ನೀಡಿದ್ದು, ವರ್ಷವಾರು ವಿವರ ಕೆಳಗಿನಂತಿದೆ.
<table>
<tr><th rowspan="2">ಆರ್ಥಿಕ ವರ್ಷ</th><th colspan="2">ಕೈಲಾಸ ಮಾನಸ ಸರೋವರ ಯಾತ್ರಿಕರಿಗೆ ಸಹಾಯಧನ</th><th colspan="2">ಚಾರ್ ಧಾಮ್ ಯಾತ್ರಿಕರಿಗೆ ಸಹಾಯಧನ</th></tr>
<tr><th>ಯಾತ್ರಿಕರ ಸಂಖ್ಯೆ</th><th>ಒಟ್ಟು ಅನುದಾನ (ರೂ.ಲಕ್ಷಗಳಲ್ಲಿ)</th><th>ಯಾತ್ರಿಕರ ಸಂಖ್ಯೆ</th><th>ಒಟ್ಟು ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><td>2022-23</td><td>2</td><td>0.60</td><td>2165</td><td>433.00</td></tr>
<tr><td>2023-24</td><td>-</td><td>-</td><td>2813</td><td>562.60</td></tr>
<tr><td>2024-25</td><td>-</td><td>-</td><td>3784</td><td>756.80</td></tr>
<tr><td>ಒಟ್ಟು</td><td>2</td><td>0.60</td><td>8762</td><td>1752.40</td></tr>
</table>
</td></tr>
<tr><td>ಉ)</td><td>ಕಡಿಮೆ ಆದಾಯವಿರುವ ಎಷ್ಟು ಮುಜರಾಯಿ ದೇವಸ್ಥಾನಗಳಿಗೆ ದೈನಂದಿನ ಪೂಜಾ ಕೈಂಕರ್ಯಗಳಿಗೆ ಸರ್ಕಾರ ವಾರ್ಷಿಕವಾಗಿ ಎಷ್ಟು ಸಹಾಯಧನ ನೀಡುತ್ತಿದೆ; ಇದನ್ನು ಹೆಚ್ಚಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ?</td><td>ಯಾವುದೇ ಗಮನಾರ್ಹ ಆದಾಯವಿಲ್ಲದ “ಸಿ” ವರ್ಗದ ದೇವಾಲಯಗಳಿಗೆ ನಗದು ಸಹಾಯಾನುದಾನವನ್ನು ಮಂಜೂರು ಮಾಡುತ್ತಿದ್ದು, 2023-24ನೇ ಸಾಲಿನಲ್ಲಿ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 327 ರ ಘೋಷಣೆಯನ್ವಯ ಒಟ್ಟು 121 ಸಂಸ್ಥೆಗಳಿಗೆ ವಾರ್ಷಿಕವಾಗಿ ರೂ.15,000/-ಗಳಂತೆ ದೈನಂದಿನ ಪೂಜಾ ಕೈಂಕರ್ಯಗಳಿಗೆ ನಗದು ಸಹಾಯಾನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>ಇದನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.</td></tr>
</table>

ಸಂಖ್ಯೆ: ಕಂಇ 11 ಮುಸಪ್ರ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.

# ಅನುಬಂಧ

| ಕ್ರ.ಸಂ | ವರ್ಷ | ಹಿಂದೂ ಧಾರ್ಮಿಕ ದತ್ತಿ ಇಲಾಖೆಯಲ್ಲಿ ರೂಪಿಸಿದ ಹೊಸ ಯೋಜನೆ |
|---|---|---|
| 1 | 2022-23 | • **ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಸರ್ಕಾರದಿಂದ ಸಹಾಯಧನ ನೀಡುವ ಬಗ್ಗೆ:-** 2022-23ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆ ಕೈಗೊಳ್ಳುವ 30,000 ಯಾತ್ರಾರ್ಥಿಗಳಿಗೆ ಸರ್ಕಾರದಿಂದ ತಲಾ ರೂ. 5,000/-ಗಳ ಸಹಾಯಧನವನ್ನು ನೀಡುವ ಯೋಜನೆಯನ್ನು ಜಾರಿಗೆ ತರಲಾಗಿರುತ್ತದೆ.<br>• **ಕರ್ನಾಟಕ ರಾಜ್ಯದಿಂದ ಪುಣ್ಯಕ್ಷೇತ್ರಗಳಿಗೆ ಪ್ರವಾಸ ಕೈಗೊಳ್ಳಲು ಅನುಕೂಲವಾಗುವಂತೆ ರಿಯಾಯಿತಿ ದರದಲ್ಲಿ ಪ್ಯಾಕೇಜ್‌ಗಳನ್ನು ರೂಪಿಸುವ ಬಗ್ಗೆ:-** ಕರ್ನಾಟಕ ರಾಜ್ಯದಿಂದ ಪುಣ್ಯಕ್ಷೇತ್ರಗಳಿಗೆ ಪ್ರವಾಸ ಕೈಗೊಳ್ಳಲು ಅನುಕೂಲವಾಗುವಂತೆ ರೈಲ್ವೆ ಇಲಾಖೆಯ ಸಹಯೋಗದೊಂದಿಗೆ "ಭಾರತ್ ಗೌರವ್" ಯೋಜನೆಯಡಿಯಲ್ಲಿ ಪ್ರಸಿದ್ಧ ಯಾತ್ರಾ ಸ್ಥಳಗಳಾದ ಕಾಶಿ, ಪ್ರಯಾಗರಾಜ್ ಮತ್ತು ಅಯೋಧ್ಯೆ ಕ್ಷೇತ್ರಗಳಿಗೆ ರೈಲು ಮೂಲಕ ಪ್ರವಾಸ ಏರ್ಪಡಿಸುವ ಯೋಜನೆಯನ್ನು ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಐ.ಆರ್.ಸಿ.ಟಿ.ಸಿ ರವರ ಸಹಯೋಗದೊಂದಿಗೆ ಆಯೋಜಿಸಿ, ಪ್ರವಾಸಗಳನ್ನು ಏರ್ಪಡಿಸಲಾಗಿರುತ್ತದೆ. |
| 2 | 2023-24 | ಯಾವುದೂ ಇರುವುದಿಲ್ಲ. |
| 3 | 2024-25 | ಯಾವುದೂ ಇರುವುದಿಲ್ಲ. |

ಆಯುಕ್ತರು
ಧಾರ್ಮಿಕ ದತ್ತಿ ಇಲಾಖೆ
ಬೆಂಗಳೂರು



No. RD/11/MSPA/2026-MUZ-REVENUE DEPATMENT SEC (Computer No. 2050888)

Scanned with OKEN Scanner

ಅನುಬಂಧ

**ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ಅನುಷ್ಠಾನಗೊಂಡು ಮುಂದುವರೆದ ಯೋಜನಾ ಕಾರ್ಯಕ್ರಮಗಳ ವಿವರ:-**

- **ದುರಸ್ಥಿ / ಜೀರ್ಣೋದ್ಧಾರ / ನಿರ್ಮಾಣ:-** ದೇವಸ್ಥಾನ ಮತ್ತು ಇತರೆ ಧಾರ್ಮಿಕ ಸಂಸ್ಥೆಗಳ ದುರಸ್ಥಿ/ ಜೀರ್ಣೋದ್ಧಾರ/ ನಿರ್ಮಾಣಕ್ಕಾಗಿ ಆಯವ್ಯಯದಲ್ಲಿ ಯೋಜನೇತರ ಲೆಕ್ಕ ಶೀರ್ಷಿಕೆ ಅಡಿ ಅನುದಾನ ಮಂಜೂರು ಮಾಡಲಾಗುತ್ತಿದೆ.
- **ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯ ಮತ್ತು ಹೊರ ರಾಜ್ಯಗಳಲ್ಲಿರುವ ಕರ್ನಾಟಕ ರಾಜ್ಯ ಛತ್ರಗಳ ವಸತಿ ಸೌಲಭ್ಯ:-** ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯ ಮತ್ತು ಹೊರ ರಾಜ್ಯಗಳಲ್ಲಿರುವ ಕರ್ನಾಟಕ ರಾಜ್ಯ ಛತ್ರಗಳ ವಸತಿ ಸೌಲಭ್ಯ ಗಳನ್ನು ಒದಗಿಸಲು 2010-11ನೇ ಸಾಲಿನಿಂದ ಸರ್ಕಾರವು ಧಾರ್ಮಿಕ ದತ್ತಿ ಇಲಾಖೆಗೆ ಅನುದಾನವನ್ನುಮಂಜೂರು ಮಾಡಲಾಗುತ್ತಿದೆ.
- **ಆರಾಧನಾ ಯೋಜನೆ:-** 1991-92ನೇ ಸಾಲಿನಿಂದ ಆರಾಧನಾ ಯೋಜನೆಯು ಜಾರಿಗೆ ಬಂದಿದ್ದು, ಈ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಮತ್ತು ಹಿಂದುಳಿದ ಪಂಗಡದವರು ಹಾಗೂ ಅಲ್ಪ ಸಂಖ್ಯಾತರು ವಾಸಿಸುವ ಸ್ಥಳಗಳಲ್ಲಿ ಪ್ರಾರ್ಥನಾ ಮಂದಿರ, ಪೂಜಾ ಮಂದಿರ ನಿರ್ಮಿಸಲು ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ. ಈ ಯೋಜನೆಯ ಅನುದಾನ ಕುರಿತಂತೆ ಸರ್ಕಾರವು ಪ್ರತ್ಯೇಕ ಮಾರ್ಗಸೂಚಿಯನ್ನು ಸಹ ಹೊರಡಿಸಿರುತ್ತದೆ.
- **ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ :-** ಈ ಯೋಜನೆಗಳು 2011-12ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ. ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿಯ ಜನಾಂಗದವರು ಮತ್ತು ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿನ ದೇವಾಲಯದ ಜೀರ್ಣೋದ್ಧಾರ/ ನವನಿರ್ಮಾಣ ಅಥವಾ ಸಮುದಾಯ ಭವನ / ಕಲ್ಯಾಣ ಮಂಟಪ ಜೀರ್ಣೋದ್ಧಾರ / ನವನಿರ್ಮಾಣಗಳಿಗೆ ಸರ್ಕಾರವು ಧನ ಸಹಾಯ ನೀಡುತ್ತಿದೆ.
- **ತಸ್ತೀಕ್ ಅನುದಾನ:-** ಕರ್ನಾಟಕ (ಮತೀಯ ಮತ್ತು ಧರ್ಮಾದಾಯ) ಇನಾಂ ರದ್ದಿಯಾತಿ ಕಾಯ್ದೆ 1955 ರನ್ವಯ ಧರ್ಮಾದಾಯ/ಧಾರ್ಮಿಕ ಸಂಸ್ಥೆಗಳು ಹೊಂದಿದ್ದ ಇನಾಂ ಜಮೀನುಗಳು ದಿನಾಂಕ 01.07.1970 ರಿಂದ ಸರ್ಕಾರದಲ್ಲಿ ವಿಹಿತಗೊಂಡಿರುವುದಕ್ಕೆ ಪರಿಹಾರಾರ್ಥವಾಗಿ ಅದೇ ದಿನಾಂಕದಿಂದ ಜಾರಿಗೆ ಬರುವಂತೆ ತಸ್ತೀಕ್ ಮೊತ್ತವನ್ನು ನಿಗಧಿಪಡಿಸಲಾಗಿರುತ್ತದೆ. 2015-16ನೇ ಸಾಲಿನಿಂದ ಜಾರಿಗೆ ಬರುವಂತೆ ವಾರ್ಷಿಕ ಕನಿಷ್ಠ ತಸ್ತೀಕ್ ಮೊತ್ತವನ್ನು ರೂ.36,000/- ಗಳಿಗೆ, 2017-18ನೇ ಸಾಲಿನಿಂದ ಜಾರಿಗೆ ಬರುವಂತೆ ವಾರ್ಷಿಕ ಕನಿಷ್ಠ ತಸ್ತೀಕ್ ಮೊತ್ತವನ್ನು ರೂ.48,000/- ಗಳಿಗೆ, 2022-23ನೇ ಸಾಲಿನಿಂದ ಜಾರಿಗೆ ಬರುವಂತೆ ವಾರ್ಷಿಕ ಕನಿಷ್ಠ ತಸ್ತೀಕ್ ಮೊತ್ತವನ್ನು ರೂ.60,000/- ಗಳಿಗೆ ಹಾಗೂ 2025-26ನೇ ಸಾಲಿನಿಂದ ಜಾರಿಗೆ ಬರುವಂತೆ ವಾರ್ಷಿಕ ಕನಿಷ್ಠ ತಸ್ತೀಕ್ ಮೊತ್ತವನ್ನು ರೂ.72,000/- ಗಳಿಗೆ ನಿಗಧಿಪಡಿಸಲಾಗಿದೆ.
- **ವರ್ಷಾಸನ ಅನುದಾನ:-** ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರನ್ವಯ ವರ್ಷಾಸನ ನಿಗಧಿಪಡಿಸಿರುವ ದೇವಸ್ಥಾನ ಮತ್ತು ಇತರ ಧಾರ್ಮಿಕ ಸಂಸ್ಥೆಗಳಿಗೆ ವರ್ಷಾಸನ ಮೊತ್ತವನ್ನು ಪಾವತಿಸಲಾಗುತ್ತಿದೆ. 2018-19ನೇ ಸಾಲಿನಿಂದ ಜಾರಿಗೆ ಬರುವಂತೆ ವಾರ್ಷಿಕ ಕನಿಷ್ಠ ವರ್ಷಾಸನ ಮೊತ್ತವನ್ನು ರೂ.48,000/- ಗಳಿಗೆ ನಿಗಧಿಪಡಿಸಲಾಗಿದೆ. 2023-24ನೇ ಸಾಲಿನಿಂದ

ಜಾರಿಗೆ ಬರುವಂತೆ ವಾರ್ಷಿಕ ಕನಿಷ್ಠ ವರ್ಷಾಸನ ಮೊತ್ತವನ್ನು ರೂ.60,000/- ಗಳಿಗೆ ನಿಗಧಿಪಡಿಸಲಾಗಿದೆ.

- **ಕೈಲಾಸ ಮಾನಸ ಸರೋವರ ಮತ್ತು ಚಾರ್‌ಧಾಮ್ ಯಾತ್ರಿಕರಿಗೆ ಸಹಾಯಧನ :-** ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಳ್ಳುವ ಯಾತ್ರಿಕರಿಗೆ ಪ್ರೋತ್ಸಾಹ ಧನವನ್ನು ನೀಡಲು ಉದ್ದೇಶಿಸಿ, 2006-07 ನೇ ಸಾಲಿನಿಂದ ಸರ್ಕಾರವು ಈ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಅರ್ಹ ಯಾತ್ರಾರ್ಥಿಗಳಿಗೆ ಪ್ರಸ್ತುತ ತಲಾ ರೂ.30,000/-ಗಳನ್ನು ನೀಡಲಾಗುತ್ತಿದೆ. ಹಾಗೂ ಚಾರ್‌ಧಾಮ್ ಯಾತ್ರೆ (ಕೇದಾರ್‌ನಾಥ್, ಬದ್ರಿನಾಥ್, ಗಂಗೋತ್ರಿ, ಮತ್ತು ಯಮುನೋತ್ರಿ) ಕೈಗೊಳ್ಳುವ ಯಾತ್ರಿಕರಿಗೆ ಪ್ರೋತ್ಸಾಹ ಧನವನ್ನು ನೀಡಲು ಉದ್ದೇಶಿಸಿ, ತಲಾ ರೂ.20,000/-ಗಳ ಸಹಾಯಧನ ನೀಡುವ ಯೋಜನೆಯನ್ನು 2014-15ನೇ ಸಾಲಿನಿಂದ ಸರ್ಕಾರವು ಜಾರಿಗೆ ತಂದಿರುತ್ತದೆ.
- **ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಸರ್ಕಾರದಿಂದ ಸಹಾಯಧನ ನೀಡುವ ಬಗ್ಗೆ:-**2022-23ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆ ಕೈಗೊಳ್ಳುವ 30,000 ಯಾತ್ರಾರ್ಥಿಗಳಿಗೆ ಸರ್ಕಾರದಿಂದ ತಲಾ ರೂ. 5,000/-ಗಳ ಸಹಾಯಧನವನ್ನು ನೀಡುವ ಬಗ್ಗೆ ಸರ್ಕಾರದಿಂದ ಆದೇಶವಾಗಿದ್ದು, ಸದರಿ ಯೋಜನೆಯ ಮಾರ್ಗಸೂಚಿಯನ್ವಯ 2022-23ನೇ ಸಾಲಿನಿಂದ ಕಾಶಿ ಯಾತ್ರೆ ಕೈಗೊಂಡು ಅರ್ಜಿ ಸಲ್ಲಿಸಿದ್ದ, ಯಾತ್ರಾರ್ಥಿಗಳಿಗೆ ತಲಾ ರೂ.5,000/-ಗಳಂತೆ ಡಿ.ಬಿ.ಟಿ ಮೂಲಕ ಸರ್ಕಾರದ ಸಹಾಯಾನುದಾನ ವಿತರಿಸಲಾಗಿರುತ್ತದೆ.
- **ಕರ್ನಾಟಕ ರಾಜ್ಯದಿಂದ ಪುಣ್ಯಕ್ಷೇತ್ರಗಳಿಗೆ ಪ್ರವಾಸ ಕೈಗೊಳ್ಳಲು ಅನುಕೂಲವಾಗುವಂತೆ ರಿಯಾಯಿತಿ ದರದಲ್ಲಿ ಪ್ಯಾಕೇಜುಗಳನ್ನು ರೂಪಿಸುವ ಬಗ್ಗೆ:-** 2023-24ನೇ ಸಾಲಿನಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯದಿಂದ ಪುಣ್ಯ ಕ್ಷೇತ್ರಗಳಿಗೆ ಕಡಿಮೆ ವೆಚ್ಚದಲ್ಲಿ ತೆರಳಲು ಅನುಕೂಲವಾಗುವಂತೆ ರಿಯಾಯ್ತಿ ದರದಲ್ಲಿ ಪ್ಯಾಕೇಜ್ ರೂಪಿಸಿದ್ದು, "ಕರ್ನಾಟಕ ಭಾರತ್ ಗೌರವ್" ಯೋಜನೆಯನ್ನು IRCTC ಮತ್ತು ಭಾರತೀಯ ರೈಲ್ವೇ ಇಲಾಖೆಯ ಸಹಯೋಗದೊಂದಿಗೆ ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ವಿಶೇಷ ರೈಲಿನ ಮೂಲಕ ಪ್ರವಾಸವನ್ನು ಕೈಗೊಳ್ಳಲಾಗುತ್ತಿದೆ. ಈ ವಿಶೇಷ ರೈಲಿನಲ್ಲಿ ತೆರಳುವ ಯಾತ್ರಾರ್ಥಿಗಳಿಗೆ, ಉಪಹಾರ, ಊಟ, ತಂಗುವಿಕೆ, ಸ್ಥಳೀಯ ಸಾರಿಗೆ ಮತ್ತು ಸ್ಥಳೀಯ ವೀಕ್ಷಣೆ ಒಳಗೊಂಡಿರುತ್ತದೆ.

"ಕರ್ನಾಟಕ ಭಾರತ್ ಗೌರವ್ ಕಾಶಿ-ಗಯಾ ದರ್ಶನ"ಯೋಜನೆಯಡಿ ವಾರಣಾಸಿ, ಅಯೋಧ್ಯೆ ಪ್ರಯಾಗ್ರಾಜ್ ಮತ್ತು ಗಯಾ ಕ್ಷೇತ್ರಗಳಿಗೆ ಪ್ರಯಾಣಿಸುವ ಯಾತ್ರಾರ್ಥಿಗಳಿಗೆ ತಲಾ ರೂ.32,500/-ಗಳಂತೆ ಪ್ಯಾಕೇಜ್ ರೂಪಿಸಿದ್ದು, ಈ ಮೊತ್ತದಲ್ಲಿ ತಲಾ ರೂ.17,500/- ಗಳನ್ನು ರಾಜ್ಯ ಸರ್ಕಾರದ ವತಿಯಿಂದ ಭರಿಸಿ, ಉಳಿದ ಮೊತ್ತ ರೂ.15000/-ಗಳನ್ನು ಯಾತ್ರಾರ್ಥಿಗಳು ಪಾವತಿಸಬೇಕಾಗಿರುತ್ತದೆ. ಈ ಯೋಜನೆಯಡಿ 17 ಟ್ರಿಪ್ಪಳನ್ನು ಪೂರೈಸಿದ್ದು, ಒಟ್ಟು 10280 ಯಾತ್ರಾರ್ಥಿಗಳು ಈ ಯೋಜನೆಯಡಿ ಪ್ರವಾಸ ಕೈಗೊಂಡಿರುತ್ತಾರೆ,

"ಕರ್ನಾಟಕ ಭಾರತ್ ಗೌರವ್ ದಕ್ಷಿಣ ಯಾತ್ರೆ" ಯೋಜನೆಯಡಿ ಯಾತ್ರಾ ಸ್ಥಳಗಳಾದ ರಾಮೇಶ್ವರ, ಕನ್ಯಕುಮಾರಿ, ಮಧುರೈ ಮತ್ತು ತಿರುವನಂತಪುರಂ ಕ್ಷೇತ್ರಗಳಿಗೆ ರೈಲ್ವೆ ಇಲಾಖೆಯ ಸಹಯೋಗದೊಂದಿಗೆ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಯಾತ್ರೆಯನ್ನು ಆಯೋಜಿಸಲಾಗಿದೆ. ಈ ಯೋಜನೆಯಡಿ ಪ್ರಯಾಣಿಸುವ ಯಾತ್ರಾರ್ಥಿಗಳಿಗೆ ತಲಾ

ರೂ.25,000/- ಗಳಂತೆ ಪ್ಯಾಕೇಜ್ ರೂಪಿಸಿದ್ದು, ಈ ಮೊತ್ತದಲ್ಲಿ ತಲಾ ರೂ.15,000/- ಗಳನ್ನು ರಾಜ್ಯ ಸರ್ಕಾರದ ವತಿಯಿಂದ ಭರಿಸಿ ಉಳಿದ ಮೊತ್ತ ರೂ.10000/-ಗಳನ್ನು ಯಾತ್ರಾರ್ಥಿಗಳು ಪಾವತಿಸಬೇಕಾಗಿರುತ್ತದೆ. ಈ ಯೋಜನೆಯಡಿ 8 ಟ್ರಿಪ್ಪುಗಳನ್ನು ಪೂರೈಸಿದ್ದು, ಒಟ್ಟು 3498 ಯಾತ್ರಾರ್ಥಿಗಳು ಈ ಯೋಜನೆಯಡಿ ಪ್ರವಾಸ ಕೈಗೊಂಡಿರುತ್ತಾರೆ.

"ಭಾರತ್ ಗೌರವ್ ದ್ವಾರಕ ಯಾತ್ರಾ"ಯೋಜನೆಯಡಿ ದ್ವಾರಕಾ, ನಾಗೇಶ್ವರ, ಸೋಮನಾಥ್, ತ್ರಯಂಬಕೇಶ್ವರ ಕ್ಷೇತ್ರಗಳಿಗೆ ರೈಲ್ವೆ ಇಲಾಖೆಯ ಸಹಯೋಗದೊಂದಿಗೆ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ 8 ದಿನಗಳ ಯಾತ್ರೆಯನ್ನು ಆಯೋಜಿಸಲಾಗಿದೆ. ಈ ಯೋಜನೆಯಡಿ ಪ್ರಯಾಣಿಸುವ ಯಾತ್ರಾರ್ಥಿಗಳಿಗೆ ತಲಾ ರೂ.32,500/- ಗಳಂತೆ ಪ್ಯಾಕೇಜ್ ರೂಪಿಸಿದ್ದು, ಈ ಮೊತ್ತದಲ್ಲಿ ತಲಾ ರೂ.17,500/- ಗಳನ್ನು ರಾಜ್ಯ ಸರ್ಕಾರದ ವತಿಯಿಂದ ಭರಿಸಿ ಉಳಿದ ಮೊತ್ತ ರೂ.10000/-ಗಳನ್ನು ಯಾತ್ರಾರ್ಥಿಗಳು ಪಾವತಿಸಬೇಕಾಗಿರುತ್ತದೆ. ಈ ಯೋಜನೆಯಡಿ ಒಂದು ಟ್ರಿಪ್ ಪೂರೈಸಿದ್ದು 517 ಯತ್ರಾರ್ಥಿಗಳು ಪ್ರಯಾಣಿಸಿರುತ್ತಾರೆ.

ಭಾರತ್ ಗೌರವ್ ಪೂರಿ ಜಗನ್ನಾಥ ದರ್ಶನ ಯಾತ್ರೆ ಯೋಜನೆಯಡಿ ಪುರಿ, ಕೊನಾರ್ಕ್, ಗಂಗಾ ಸಾಗರ್, ಕೊಲ್ಕತ್ತಾ ಕ್ಷೇತ್ರಗಳಿಗೆ ರೈಲ್ವೆ ಇಲಾಖೆಯ ಸಹಯೋಗದೊಂದಿಗೆ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ 8 ದಿನಗಳ ಯಾತ್ರೆಯನ್ನು ಆಯೋಜಿಸಲಾಗಿದೆ. ಈ ಯೋಜನೆಯಡಿ ಪ್ರಯಾಣಿಸುವ ಯಾತ್ರಾರ್ಥಿಗಳಿಗೆ ತಲಾ ರೂ.32,500/- ಗಳಂತೆ ಪ್ಯಾಕೇಜ್ ರೂಪಿಸಿದ್ದು, ಈ ಮೊತ್ತದಲ್ಲಿ ತಲಾ ರೂ.17,500/- ಗಳನ್ನು ರಾಜ್ಯ ಸರ್ಕಾರದ ವತಿಯಿಂದ ಭರಿಸಿ ಉಳಿದ ಮೊತ್ತ ರೂ.15,000/-ಗಳನ್ನು ಯಾತ್ರಾರ್ಥಿಗಳು ಪಾವತಿಸಬೇಕಾಗಿರುತ್ತದೆ. ಈ ಯೋಜನೆಯಡಿ ಒಂದು ಟ್ರಿಪ್ ಪೂರೈಸಿದ್ದು 1263 ಯತ್ರಾರ್ಥಿಗಳು ಪ್ರಯಾಣಿಸಿರುತ್ತಾರೆ.

**ಮುಂದುವರೆದು, ರಾಜ್ಯದ ಮುಜರಾಯಿ ದೇವಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ/ನೌಕರರಿಗೆ ನೀಡಲಾಗುತ್ತಿರುವ ಸೌಲಭ್ಯಗಳು ಈ ಕೆಳಕಂಡಂತಿವೆ:-**

1. ಸರ್ಕಾರದ ಆದೇಶ ಸಂಖ್ಯೆ: ಕಂಇ 56 ಮುಸೇವಿ 2018, ದಿನಾಂಕ:18.10.2021ರ ಆದೇಶಾನುಸಾರ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಲ್ಲಿ ಈಗಾಗಲೇ 5 ನೇ ವೇತನ ಶ್ರೇಣಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು 1034 ದೇವಾಲಯದ ನೌಕರರು/ ಅರ್ಚಕರುಗಳಿಗೆ ಮಾನದಂಡಗಳು/ ಷರತ್ತುಗಳನ್ನು ವಿಧಿಸಿ, ವೇತನ ಶ್ರೇಣಿ ಸೌಲಭ್ಯಗಳನ್ನು ಮಂಜೂರು ಮಾಡಿರುವಂತೆ ವೇತನವನ್ನು ಪಾವತಿಸಲಾಗುತ್ತಿದೆ.
2. ಸರ್ಕಾರದ ಆದೇಶ ಸಂಖ್ಯೆ ಕಂ ಇ 54 ಮುಸೇವಿ 2017, ದಿನಾಂಕ: 17.07.2019ರ ಆದೇಶಾನುಸಾರ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ನಿಯಮಗಳು, 2019ರ ನಿಯಮ 8ರ ಕೋಷ್ಟಕದಲ್ಲಿ ನಿಗಧಿಪಡಿಸಿರುವ ವೇತನ ಮತ್ತು ಇತರ ಭತ್ಯೆಗಳನ್ನು ಪಾವತಿಸಲಾಗುತ್ತಿದೆ. (ಪ್ರತಿ ಲಗತ್ತಿಸಿದೆ.)
3. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು, 2002ರ ನಿಯಮ 8 (10)ರನ್ವಯ ರಾಜ್ಯ ಸರ್ಕಾರವು ನಿಗಧಿಪಡಿಸುವ ತುಟ್ಟಿಭತ್ಯೆಯ ಶೇ.

50ಕ್ಕಿಂತ ಕಡಿಮೆಯಿಲ್ಲದ ದರಕ್ಕನುಗುಣವಾಗಿ ತುಟ್ಟಿಭತ್ಯೆಯನ್ನು ದೇವಾಲಯದ ನೌಕರರಿಗೆ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆ.

4. ಅಧಿಸೂಚಿತ "ಸಿ" ದೇವಾಲಯದ ಸಿಬ್ಬಂದಿ/ನೌಕರರು ಮರಣ ಹೊಂದಿದಲ್ಲಿ ಅವರ ಕುಟುಂಬದ ವಾರಸುದಾರರಿಗೆ ರೂ.2.00 ಲಕ್ಷಗಳನ್ನು ಮರಣಾಂತ ಪರಿಹಾರ ಧನವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ನೀಡಲಾಗುತ್ತಿದೆ.
5. ಅಧಿಸೂಚಿತ ದೇವಾಲಯದ ಸಿಬ್ಬಂದಿ/ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಪ್ರೋತ್ಸಾಹ ಧನವನ್ನು ಪಾವತಿಸಲಾಗುತ್ತಿದೆ.
6. ದೇವಾಲಯದ ಅರ್ಚಕರು ವಂಶಪಾರಂಪರ್ಯ ಅರ್ಚಕರಾಗಿದ್ದಲ್ಲಿ, ಅರ್ಚಕರ ಮರಣ ನಂತರ ಅವರ ಕುಟುಂಬದ ಒಬ್ಬರಿಗೆ ಅರ್ಚಕತನವನ್ನು ವಹಿಸುವುದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.
7. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು, 2002ರ ನಿಯಮ 16ರ ಅಡಿಯಲ್ಲಿ ಅಧಿಸೂಚಿತ ಸಂಸ್ಥೆಗಳ ಅರ್ಚಕರು ಮತ್ತು ದೇವಸ್ಥಾನದ ನೌಕರರಿಗೆ ನಿವೃತ್ತಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
8. ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ 25,551 ಧಾರ್ಮಿಕ ಸಂಸ್ಥೆಗಳ/ ದೇವಾಲಯಗಳಲ್ಲಿರುವ ಅರ್ಚಕರಿಗೆ ಪ್ರಸ್ತುತ ಪಾವತಿಸುತ್ತಿರುವ ವಾರ್ಷಿಕ ತಸ್ತೀಕ್ ಮೊತ್ತವನ್ನು ರೂ.60,000/-ಗಳಿಂದ ರೂ.72,000/-ಗಳಿಗೆ ಹೆಚ್ಚಿಸುವ ಮೂಲಕ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ 'ಸಿ' ದರ್ಜೆ ದೇವಸ್ಥಾನಗಳ ಅರ್ಚಕರುಗಳಿಗೆ ಅನುಕೂಲ ಮಾಡಿ ಕೊಡಲಾಗಿದೆ ಹಾಗೂ ವಾರ್ಷಿಕ ರೂ. 72,000/-ವರ್ಷಾಸನ ಸೌಲಭ್ಯವನ್ನು 'ಸಿ' ದರ್ಜೆ ದೇವಸ್ಥಾನಗಳ ಅರ್ಚಕರುಗಳಿಗೆ ನೀಡಲಾಗಿದೆ.

***